ಇಂದು ದಿನಾಂಕ **12-09-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಂದೆ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರವನ್ನು ನೋಡಿರುತ್ತೇನೆ. ಈಗ ನಾನು ನೊಡುತ್ತಿರುವ ಮೂಲ ನೊಂದಾಯಿತ ಖರೀದಿ ಪತ್ರವು ನನ್ನ ತಂದೆ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರ ಆಗಿರುತ್ತದೆ. ಸಾಕ್ಷಿ ಖರೀದಿ ಪತ್ರವನ್ನು ಗುರುತಿಸಿದ್ದರಿಂದ ಅದನ್ನು ನಿಡಿ **1** ಎಂದು ಗುರುತಿಸಲಾಯಿತು. ಖರೀದಿ ಪತ್ರದ ಒಕ್ಕಣಿಕೆಯಂತೆ **30** X **45** ಅಡಿ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದರೆ ನಿಜ. ಈಗ ನಾನು ನೋಡುತ್ತಿರುವ ಒಪ್ಪಿಗೆ ಪತ್ರ ನನ್ನ ತಂದೆ ಖರೀದಿ ಪತ್ರದಲ್ಲಿ ಕೆಲವು ಕಡೆ ವಿಸ್ತೀರ್ಣದಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸಿಕೊಡುವುದಾಗಿ ಪ್ರತಿವಾದಿಗೆ ಬರೆದುಕೊಟ್ಟ ಒಪ್ಪಿಗೆ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲಾ. ಖರೀದಿ ಪತ್ರದ ಸಮಯದಲ್ಲಿ ನಾನು ಹಾಜರು ಇರಲಿಲ್ಲಾ. ಸದರೀ ಪತ್ರಕ್ಕೆ ನಾನು ಸಾಕ್ಷಿ ಸಹಿ ಮಾಡಿರುವುದಿಲ್ಲಾ. ಪ್ರತಿವಾದಿಗೆ ನನ್ನ ತಂದೆ ಒಟ್ಟು **1350** ಚದುರ ಅಡಿ ಜಾಗೆಯನ್ನು ಮಾರಾಟ ಮಾಡಿದ್ದು ಖರೀದಿ ಪತ್ರದಲ್ಲಿ **750** ಚದುರ ಅಡಿ ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲಾ. **30** X **45** ಅಡಿ ವಿಸ್ತೀರ್ಣ ಎಂದರೆ ಒಟ್ಟು **1350** ಚದುರ ಅಡಿಯಾಗುತ್ತದೆ ಎಂದರೆ ಸಾಕ್ಷಿಯು **30** X **25** ಅಡಿ ವಿಸ್ತೀರ್ಣದ ಆಸ್ತಿಯನ್ನು ಮಾತ್ರ ಮಾರಾಟ ಮಾಡಲಾಗಿದೆ ಎಂದು ಹೇಳುತ್ತಾರೆ. **30** X **45** ಅಡಿ ವಿಸ್ತೀರ್ಣದ ಆಸ್ತಿಯನ್ನು ಮಾತ್ರ

ಮಾರಾಟ ಮಾಡಿದ್ದಾರೆ ಎಂದು ತೋರಿಸಲು ನಾನು ಪ್ರತ್ಯೇಕ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲಾ. ನನ್ನ ತಂದೆ **1997** ರಲ್ಲಿ ಮೃತಪಟ್ಟಿದ್ದಾರೆ ಎಂದರೆ ನಿಜ. ನಾನು ಈಗ ನೊಡುತ್ತಿರುವ ಮೃತ್ಯು ಪತ್ರ ನನ್ನ ತಂದೆಯ ಮೃತ್ಯು ಪತ್ರ ಆಗಿರುತ್ತದೆ ಎಂದರೆ ನಿಜ. ಸಾಕ್ಷಿ ದಾಖಲೆಯನ್ನು ಗುರುತಿಸಿದ್ದರಿಂದ ಅದನ್ನು ನಿಡಿ **2** ಎಂದು ಗುರುತಿಸಲಾಯಿತು. ನನ್ನ ತಂದೆಗೆ **1996** ರ ಎಪ್ರಿಲ್ ತಿಂಗಳಿನಿಂದ ಆರೋಗ್ಯ ಸರಿ ಇರಲಿಲ್ಲಾ ಎಂದರೆ ಸಾಕ್ಷಿ **1995** ರಿಂದಲೇ ಅವರು ಅನಾರೋಗ್ಯಪಿಡಿತರಾಗಿದ್ದರು ಎಂದು ಹೇಳುತ್ತಾರೆ. ನನ್ನ ತಂದೆಗೆ ಕ್ಯಾನ್ಸರ ಆಗಿತ್ತು ಆದರೆ ಅವರು ಓಡಾಡಿಕೊಂಡು ಇದ್ದರು.

ನನಗೆ ಒಂಟಗೂಡಿ ಎನ್ನುವವರು ಪರಿಚಯ ಇರುತ್ತಾರೆ ಎಂದರೆ ನಿಜ. ನನ್ನ ತಂದೆ ಮೃತಪಟ್ಟ ನಂತರ ನನಗೆ ಪ್ರತಿವಾದಿಗೆ ಮಾರಾಟ ಮಾಡಿದ್ದ ವಿಷಯ ಗೊತ್ತಾಯಿತು. **1997** ರಲ್ಲಿ ನನ್ನ ತಂದೆ ಮೃತಪಟ್ಟ ನಂತರದಿಂದ **2019** ರವರೆಗೆ ನಾವು ಪ್ರತಿವಾದಿಯೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡಿಲ್ಲಾ ಎಂದರೆ ಸಾಕ್ಷಿ **2016** ರಲ್ಲಿ ನೋಟಿಸು ನೀಡಿದ್ದೇವು ಎಂದು ಹೇಳುತ್ತಾರೆ. **1997** ರ ನಂತರದಿಂದ ನಾವು ದಾವಾ ಆಸ್ತಿಯನ್ನು ಅಳತೆ ಮಾಡಿಸಿಲ್ಲಾ ಎಂದರೆ ನಿಜ. ಪ್ರತಿವಾದಿ ನಮ್ಮ ಹಕ್ಕಿನ ವಿರುದ್ದ ದಾವಾ ಆಸ್ತಿಯಲ್ಲಿ ಮುಂದುವರೆದಿದ್ದಾನೆ ಎಂದರೆ ನಿಜ. **1997** ರಿಂದ **2016** ರವರೆಗೆ ನಾವು ದಾವಾ ಆಸ್ತಿಯ ಕಬ್ಜೆಯನ್ನು ಪ್ರತಿವಾದಿಗೆ ಕೇಳಿರುವುದಿಲ್ಲಾ ಎಂದರೆ ನಿಜ. ಆ ಕಾರಣ ಪ್ರತಿವಾದಿ ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇದ್ದರೆ ನಮ್ಮ ಹಕ್ಕಿನ ವಿರುದ್ದ ಮಾಲೀಕರಾಗಿರುತ್ತಾರೆ ಎನ್ನುವುದು ಸರಿಯಲ್ಲಾ.

ನಮ್ಮ ತಂದೆ ಮೃತಪಟ್ಟ ನಂತರ ವಾರಸುನಾತೆಯಿಂದ ನಮ್ಮ ಹೆಸರುಗಳು ದಾವಾ ಆಸ್ತಿಗೆ ದಾಖಲಾದ ನಂತರ ನಾವು ಈ ಪ್ರಕರಣವನ್ನು ಪ್ರಾರಂಬಿಸಿದ್ದೇವೆ ಎಂದರೆ ನಿಜ.

ನಮ್ಮ ತಂದೆಯ ಜೀವಿತಾವಧಿಯಲ್ಲಿ ಅವರು ಎಷ್ಟು ಆಸ್ತಿಗಳನ್ನು ಹೊಂದಿರುತ್ತಾರೆ ಮತ್ತು ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿದೆ. ದಾವಾ ಆಸ್ತಿಗೆ ಮಹಾನಗರ ಪಾಲಿಕೆಯ ಕರವನ್ನು ನಾವೇ ತುಂಬುತ್ತಾ ಬಂದಿರುತ್ತೇವೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೋ ಇಲ್ಲವೋ ಗೊತ್ತಿಲ್ಲಾ. ನಮ್ಮ ತಂದೆ ಮೃತಪಟ್ಟ ನಂತರದಿಂದ ನಾವೇ ಕರ ತುಂಬುತ್ತಾ ಬಂದಿರುತ್ತೇವೆ. ಪ್ರತಿವಾದಿಯೇ **1986** ರಿಂದ ಇದುವರೆಗೂ ಕರ ತುಂಬುತ್ತಾ ಬಂದಿದ್ದಾನೆ ಎಂದರೆ ನನಗೆ ಗೊತ್ತಿಲ್ಲಾ. ಪ್ರತಿವಾದಿ ಸಂಪೂರ್ಣ ಮಾಲೀಕನಾತೆಯಿಂದ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದರಿಂದ ದಾವಾ ಆಸ್ತಿಯನ್ನು ನಮಗೆ ಕಬ್ಜೆ ನೀಡುವ ಪ್ರಸಂಗ ಇರುವುದಿಲ್ಲಾ ಎನ್ನುವುದು ಸರಿಯಲ್ಲಾ.

**2013** ರಲ್ಲಿ ವಾರಸಾನಾತೆಯಿಂದ ದಾವಾ ಆಸ್ತಿಗೆ ನಮ್ಮ ಹೆಸರುಗಳು ದಾಖಲಾಗಿರುತ್ತವೆ. **2016** ರಲ್ಲಿ ನಾವು ದಾವಾ ಆಸ್ತಿಯ ಅಳತೆ ಮಾಡಿರುತ್ತೆವೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ನಮ್ಮ ಮತ್ತು ಬಾಬುಲಾಲ ಮಧ್ಯೆ ಆಸ್ತಿ ವಿಭಾಗ ಆದ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲಾ. ನಮ್ಮ ಮತ್ತು ಬಾಬುಲಾಲ ಮಧ್ಯೆ ವಿಭಾಗ ಆಗಿರುವುದಿಲ್ಲಾ. ಬಾಬುಲಾಲ ವಿಭಾಗ ಆಗದೇ ತನ್ನ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲಾ. ದಿಃ **25-04-1997** ರಂದು ತನ್ನ

ಅವಿಭಾಜ್ಯ ಹಿಸ್ಸೆಯನ್ನು ನೊಂದಾಯಿತು ಖರೀದಿ ಪತ್ರದ ಮೂಲಕ ಬಾಬುಲಾಲ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ನಮ್ಮ ಮತ್ತು ಪ್ರತಿವಾದಿಯ ಮಧ್ಯೆ ಮಾಲೀಕ ಮತ್ತು ಬಾಡಿಗೆದಾರ ಸಂಬಂದ ಇಲ್ಲಾ ಎಂದರೆ ಸರಿಯಲ್ಲಾ. ನಮ್ಮ ಮತ್ತು ಪ್ರತಿವಾದಿಯ ಮಧ್ಯೆ ಮೌಖಿಕವಾಗಿ ಬಾಡಿಗೆ ವ್ಯವಹಾರ ಆಗಿದ್ದು ಪ್ರತಿವಾದಿ ಆ ಬಗ್ಗೆ ಕಾಗದವನ್ನು ಮಾಡಿಕೊಡುತ್ತೇನೆ ಎಂದು ಮುಂದೂಡುತ್ತಾ ಬಂದಿದ್ದರಿಂದ ಬಾಡಿಗೆ ಪತ್ರ ಆಗಿರುವುದಿಲ್ಲಾ.

ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನಾನು ಆದಾಯ ತೆರಿಗೆಯನ್ನು ನಾನು ವೈಯಕ್ತಿಕ ಆದಾಯದ ಮೇಲೆ ಪಾವತಿಸುವುದರಿಂದ ಅದರಲ್ಲಿ ಬಾಡಿಗೆ ಆದಾಯವನ್ನು ಕಾಣಿಸಿರುವುದಿಲ್ಲಾ. ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ನಿಜ ಸ್ಥಿತಿಯನ್ನು ಮುಚ್ಚಿಟ್ಟು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ